

ಹಾಗಾಗಿ, ನನ್ನಮ್ಮ ಸತ್ತು ಹೋಗಿ ಎಷ್ಟು ಕಾಲವಾಗಿದೆಯೋ ಅಷ್ಟೇ ವರ್ಷ ನನ್ನ ಮಗಳಿಗೆ ಆಗಿದೆ'.

'ಅಯ್ಯೋ, ನಿಮ್ಮಮ್ಮ ಸತ್ತದ್ದು, ನಿಮ್ಮ ಮಗಳು ಹುಟ್ಟಿದ್ದು ಎರಡೂ ಯಾವಾಗ ಮಾರಾಯ್ರೇ?'

'ನನ್ನ ಮಗಳು ಹುಟ್ಟಿದ್ದು, ನನ್ನಮ್ಮ ಸತ್ತಿದ್ದು ಎರಡೂ ಒಂದೇ ವರ್ಷದಲ್ಲಿ ಕುಶಾಲಪ್ಪನೋರೇ!'

'ಇದೊಳ್ಳೆ ಕತೆಯಾಯ್ತಲ್ಲ! 'ಅವ್ರು ಯಾರು' ಅಂತ ಕೇಳಿದ್ದಕ್ಕೆ 'ಜಯಮ್ಮನ ಗಂಡ' ಅಂದ್ರಂತೆ. 'ಜಯಮ್ಮ ಯಾರು' ಅಂತ ಕೇಳಿದ್ದಕ್ಕೆ 'ಅವ್ರ ಹೆಂಡ್ತಿ' ಅಂದ್ರಂತೆ. 'ಅವರಿಬ್ರೂ ಯಾರ್ರೀ?' ಅಂತ ಕೇಳಿದ್ದಕ್ಕೆ 'ಅವ್ರಿಬ್ರೂ ಗಂಡ ಹೆಂಡ್ತಿ ಕಂಡ್ರೀ' ಅಂದ್ರಂತೆ. ಹಾಗಾಯ್ತು ನಿಮ್ಮ ಮಾತು. ಅಲ್ರೀ, ಅದು ಯಾವ ಇಸವಿ ಅನ್ನೋದನ್ನಾದ್ರೂ ಹೇಳಿ. ಆಮೇಲೆ ಮುಂದಿನ ಮಾತಿಗೆ ಬರೋಣ' ಅಂತ ಅಸಹನೆಯಿಂದ ಕುಶಾಲಪ್ಪನವರು ಕೇಳಿದರು.

'ಹಾಂ, ಇಸವೀನಾ, ನೀವೇ ಲೆಕ್ಕ ಹಾಕಿಕೊಳ್ಳಿ. ನನ್ನ ಮಗಳು ಹುಟ್ಟಿದಾಗ ನನ್ನ ಮಗನಿಗೆ ಏಳು ವರ್ಷ ವಯಸ್ಸಾಗಿತ್ತು. ಸ್ಕೂಲಿಗೆ ಹೋಗ್ತಿದ್ದ.'

'ಹೋಗ್ಲಿ ಬಿಡಿ. ನಿಮ್ಮ ಮಗ ಹುಟ್ಟಿದ್ದಾದ್ರೂ ಯಾವಾಗಾಂತ ಹೇಳ್ತೀರಾ? ಉಳಿದದ್ದು ನಾನು ಲೆಕ್ಕ ಹಾಕಿಕೊಳ್ತೇನೆ.'

'ನಾನು ಮದುವೆಯಾದ ಒಂದು ವರ್ಷಕ್ಕೆ ನನ್ನ ಮಗ ಹುಟ್ಟಿದ ನೋಡಿ. ಅವನು ಹುಟ್ಟಿದ ಮೇಲೇನೇ ನಾನು ಅಭಿವೃದ್ಧಿ ಹೊಂದಿದ್ದು.'

'ಥತ್ತೇರಿ, ನಿಮ್ಮ ಮದುವೆ ಯಾವಾಗ ಆಯಿತು ಅನ್ನೋದನ್ನಾದ್ರೂ ಹೇಳ್ತೀರಾ?'

'ಅದು ಚೆನ್ನಾಗೇ ನೆನಪಿದೆ ನೋಡಿ ಕುಶಾಲಪ್ಪನವರೇ. ನನ್ನ ಮಗ ಹುಟ್ಟೋಕೆ ಒಂದು ವರ್ಷ ಇದೆ ಅನ್ನುವಾಗ ನನ್ನ ಮದುವೆ ಆಯ್ತು'.

ಕುಶಾಲಪ್ಪನೋರಿಗೆ ತಲೆ ಚಚ್ಚಿಕೊಳ್ಳೋ ಹಾಗಾಯ್ತು. ಆದ್ರೂ ಸಹನೆಯಿಂದಲೇ ಕೇಳಿದರು.